

# ರವಿಮಾಮನ ಹೊಸ ಪ್ರೇಮಲೋಕ

1987ರಲ್ಲಿ ತೆರೆಕಂಡು ಕನ್ನಡ ಸಿನಿಮಾರಂಗದ ಬಾಕ್ಸಾಫೀಸ್‌ನಲ್ಲಿ ದೊಡ್ಡ ಯಶಸ್ಸನ್ನು ಕಂಡಿದ್ದ ಸಿನಿಮಾ 'ಪ್ರೇಮಲೋಕ'. ಕ್ರೇಜಿ ಸ್ಟಾರ್‌ಗೆ ಭಾರೀ ಜನಪ್ರಿಯತೆಯನ್ನೂ ದಕ್ಕಿಸಿಕೊಟ್ಟಿದ್ದ ಈ ಸಿನಿಮಾ ಚಂದನವನದಲ್ಲಿ ಇತಿಹಾಸವನ್ನೂ ಸೃಷ್ಟಿಸಿತ್ತು.

ಇದೀಗ 'ಪ್ರೇಮಲೋಕ 2' ಸಿನಿಮಾ ಮಾಡುವುದಾಗಿ ರವಿಚಂದ್ರನ್ ಘೋಷಿಸಿದ್ದಾರೆ. ತಮ್ಮ ಹುಟ್ಟುಹಬ್ಬದ (ಮೇ 30) ದಿನದಂದೇ ಈ ಸಿನಿಮಾ ಕೆಲಸ ಆರಂಭಿಸುವುದಾಗಿ ಹೇಳಿಕೊಂಡಿದ್ದಾರೆ.

ತಾವೇ ಈ ಸಿನಿಮಾ ನಿರ್ದೇಶಿಸುತ್ತಿದ್ದು, ತಮ್ಮಿಬ್ಬರು ಮಕ್ಕಳು ಸಿನಿಮಾದಲ್ಲಿ ನಟಿಸುತ್ತಿರುವುದಾಗಿ ಹೇಳಿದ್ದಾರೆ. ಮನೋರಂಜನ್ ಮುಖ್ಯಪಾತ್ರದಲ್ಲಿದ್ದರೆ, ವಿಕ್ರಂ ಅತಿಥಿ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರಂತೆ. ಜೊತೆಗೆ ರವಿಚಂದ್ರನ್ ತಂದೆ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಈ ಸಿನಿಮಾದಲ್ಲಿ ಬರೋಬ್ಬರಿ 25 ಹಾಡುಗಳಿರಲಿವೆ ಎಂದಿದ್ದಾರೆ.

ಈ ಸಿನಿಮಾ ಬಗ್ಗೆ ಮತ್ತಷ್ಟು ಮಾತನಾಡುತ್ತಾ, 'ಎಲ್ಲಾ ವಯೋಮಾನದವರಿಗೂ ಈ ಸಿನಿಮಾ ಮುಟ್ಟಲಿದೆ. ಈ ಕೆಲವು ವರ್ಷಗಳಲ್ಲಿ 'ಪ್ರೀತಿ' ಎನ್ನುವುದು ಹಲವು ಆಯಾಮಗಳನ್ನು ಪಡೆದುಕೊಂಡಿದೆ. ಈ ಸಿನಿಮಾ ಮತ್ತೊಂದು ಹೊಸ ಆಯಾಮವನ್ನು ನೀಡಲಿದೆ. ನನಗೆ ಪ್ರೀತಿ ಬಿಟ್ಟರೆ ಬೇರೆ ಗೊತ್ತಿಲ್ಲ. ಅದನ್ನೇ ಈಗಲೂ ನೀಡುತ್ತಿದ್ದೇನೆ' ಎಂದಿದ್ದಾರೆ.

ಸದ್ಯ 'ಕೆಡಿ' ಹಾಗೂ 'ದಿ ಜಡ್ಜ್‌ಮೆಂಟ್' ಸಿನಿಮಾ ಶೂಟಿಂಗ್‌ನಲ್ಲಿ ರವಿಚಂದ್ರನ್ ತೊಡಗಿಕೊಂಡಿದ್ದಾರೆ. ಈಚೆಗೆ 'ಪರವಶ' ಎಂಬ ಹೊಸ ಪ್ರಾಜೆಕ್ಟ್ ಕೂಡ ಅವರ ಕೈಯಲ್ಲಿದೆ. ■



# ಮರಳಿ ಹರಿಪ್ರಿಯಾ

ಮದುವೆಯಾಗಿ ವರ್ಷದ ನಂತರ ಸಿನಿಮಾರಂಗದತ್ತ ಮತ್ತೆ ಹೆಜ್ಜೆ ಇಡುತ್ತಿದ್ದಾರೆ ನಟಿ ಹರಿಪ್ರಿಯಾ. ಮದುವೆ ನಂತರ ಸಮಾರಂಭಗಳಲ್ಲಿ ಮಾತ್ರ ಹರಿಪ್ರಿಯಾ–ವಸಿಷ್ಠ ಸಿಂಹ ಜೋಡಿ ಕಾಣಿಸಿಕೊಳ್ಳುತ್ತಿತ್ತು. ಇದೀಗ ಸ್ಕ್ರಿಪ್ಟ್‌ಗಳನ್ನು ಆಯ್ಕೆ ಮಾಡುವುದಕ್ಕೆ ಇದು ನನಗೆ ಸರಿಯಾದ ಸಮಯ ಎಂದು ಹರಿಪ್ರಿಯಾ ಹೇಳಿಕೊಂಡಿದ್ದಾರೆ. ಸದ್ಯ ಕನ್ನಡದಲ್ಲಿ ಹೊಸ ಪ್ರಾಜೆಕ್ಟ್‌ವೊಂದಕ್ಕೆ ಸಹಿ ಹಾಕಿದ್ದಾರೆ ಕೂಡ.

ಮದುವೆ ನಂತರ ಹರಿಪ್ರಿಯಾ ಸಣ್ಣ ಬ್ರೇಕ್‌ನಲ್ಲಿದ್ದರು. ಈ ಬ್ರೇಕ್, ಸಿನಿಮಾರಂಗದಿಂದ ದೂರವುಳಿಯುವ ಅನುಮಾನ ಹುಟ್ಟುಹಾಕಿತ್ತು. ಆದರೆ ಅವೆಲ್ಲಕ್ಕೂ ಹರಿಪ್ರಿಯಾ ನಗುತ್ತಲೇ ಉತ್ತರಿಸಿದ್ದಾರೆ.

'ಸಿನಿಮಾದಲ್ಲಿ ಅಭಿನಯಿಸುವುದು ನನ್ನ ನಿರ್ಧಾರ. ಕೆಲವರು ನನ್ನ ಪತಿ ವಸಿಷ್ಠ ಸಿಂಹ, ನನಗೆ ಬರುವ ಸಿನಿಮಾಗಳ ಆಯ್ಕೆ ವಿಷಯದಲ್ಲಿ ತಲೆ ಹಾಕುತ್ತಾರೆಂದು ತಪ್ಪು ತಿಳಿವಳಿಕೆ ಹೊಂದಿದ್ದಾರೆ. ಆದರೆ ಈ ವಿಷಯದಲ್ಲಿ ನಿರ್ಧಾರ ನನ್ನದೇ' ಎಂದಿದ್ದಾರೆ.

'ನನ್ನ ಕೆಲಸಕ್ಕೆ ವಸಿಷ್ಠ ತುಂಬಾ ಬೆಂಬಲ ನೀಡುತ್ತಾರೆ. ನಾವಿಬ್ಬರೂ ಒಬ್ಬರ ಕೆಲಸದಲ್ಲಿ ಒಬ್ಬರು ತಲೆ ಹಾಕುವುದಿಲ್ಲ. ನಾನು ನನ್ನ ಸಿನಿಮಾ ಕಥೆ ಕೇಳುವಾಗ ವಸಿಷ್ಠ ಇರುವುದಿಲ್ಲ. ನಾನು ಯಾವ ರೀತಿಯ ಕಥೆಗಳನ್ನು ಆರಿಸಿಕೊಳ್ಳಬೇಕು ಎಂಬುದನ್ನು ನಾನೇ ನಿರ್ಧರಿಸುವುದು. ಸಿನಿಮಾ ಬಗ್ಗೆ, ನಮ್ಮ ಕೆಲಸಗಳ ಬಗ್ಗೆ ಚರ್ಚೆ ಮಾಡುತ್ತೇವಷ್ಟೆ. ನಮ್ಮ ದೃಷ್ಟಿಕೋನವನ್ನು ಹೇರಲು ಹೋಗುವುದಿಲ್ಲ' ಎಂದು ಹೇಳಿದ್ದಾರೆ. ಒಳ್ಳೆಯ ಕಥೆಯ ಸಿನಿಮಾದೊಂದಿಗೆ ಮತ್ತೆ ಪ್ರೇಕ್ಷಕರ ಮುಂದೆ ಬರುವುದಾಗಿ ತಿಳಿಸಿದ್ದಾರೆ. ■